ಆದರೆ ಉತ್ತರದಲ್ಲಿ ಇದನ್ನು ಸಾಕಷ್ಟು ಒದಗಿಸಿದ್ದೇವೆಂದು ಹೇಳಿದ್ದೀರಿ. ನಮ್ಮ ಚಾಮರಾಜನಗರ, ಮೈಸೂರು ಮತ್ತು ಇನ್ನಿತರ ಜಿಲ್ಲೆಗಳಲ್ಲಿ ಕೂಡ ಅಪಾರವಾದ ಬೇಡಿಕೆ ಇದೆ. ಕರ್ನಾಟಕ ರೇಷ್ಮೆ ಬೆಳೆಯಲ್ಲಿ ಹೆಸರುವಾಸಿಯಾಗಿದೆ. ಇಡೀ ರಾಷ್ಟ್ರದಲ್ಲಿ ನಮ್ಮದೇ ಮೊದಲನೆಯದ್ದು. ಇತ್ತೀಚಿನ ವರ್ಷಗಳ ಡೇಟಾವನ್ನು ತೆಗೆದುಕೊಂಡರೆ ಇದು ಕ್ಷೀಣಿಸುತ್ತಿದೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಇದನ್ನು ಅಭಿವೃದ್ಧಿ ಪಡಿಸತಕ್ಕ ಜವಾಬ್ದಾರಿ ನಮ್ಮ ಮೇಲಿರುವ ಈ ಸಂದರ್ಭದಲ್ಲಿ ಈ V-1 ತಳಿ ರಾಜ್ಯವ್ಯಾಪಿ ಬೇಡಿಕೆ ಇರುವುದರಿಂದ ಅದನ್ನು ಒದಗಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಚಂದ್ರಗೌಡ : ಮಾನ್ಯ ಅಧ್ಯಕ್ಷರೆ, ಬಹಳ ಒಳ್ಳೆಯ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದ್ದಾರೆ. ಈಗಾಗಲೇ ಕರ್ನಾಟಕ ರಾಜ್ಯದಲ್ಲಿ ಸುಮಾರು ಎರಡು ನೂರು ಲಕ್ಷ ನರ್ಸರಿಗಳು ಆದರೆ ಸಾಕು ಎನ್ನುವಂಥ ಐಡಿಯಾ ಇತ್ತು. ಆದರೆ ನಮ್ಮ ರಾಜ್ಯದಲ್ಲಿ 484 ಲಕ್ಷದಷ್ಟು ಆ ತಳಿಯನ್ನು ಈಗಾಗಲೇ ಮಾಡಲಾಗಿದೆ. ಚಾಮರಾಜ ನಗರದಲ್ಲಿ 1.25 ಲಕ್ಷದಷ್ಟು ತಯಾರಿಯಾಗಿದೆ. ಚಾಮರಾಜನಗರದಲ್ಲಿ ಸ್ವಲ್ಪ ಕಪ್ಪು ನೆಲ ಇರತಕ್ಕ ಜಾಗಗಳಲ್ಲಿ ಎಲ್ಲರೂ ಕೂಡ ಇದನ್ನು ಉಪಯೋಗಿಸುತ್ತಿಲ್ಲ. ಅಲ್ಲಿ ಬೇರೆ ಬೇರೆ ತಳಿಯನ್ನೂ ಕೂಡ ಉಪಯೋಗಿಸುತ್ತಿದ್ದಾರೆ. ಹೀಗಾಗಿ ಅಲ್ಲಿಗೆ ಎಷ್ಟು ಬೇಕೋ ಅದಕ್ಕಿಂತ ಎರಡರಷ್ಟು ಈಗಾಗಲೇ ಉತ್ಪತ್ತಿಯಾಗಿದೆ. ಸಲಕರಣೆ ಆಗುತ್ತಿದೆ. ತಮಗೆ ಎಲ್ಲಾದರೂ ಕೊರತೆ ಇದೆಯೆಂಬ ಬಗ್ಗೆ ಏನಾದರೂ ನನಗೆ ಮಾಹಿತಿ ಕೊಡುವುದಾದರೆ, ಆ ಕೊರತೆಯನ್ನು ತಕ್ಷಣವೇ ನೀಗಿಸತಕ್ಕ ವ್ಯವಸ್ಥೆಯನ್ನು ಮಾಡಲು ನಾನು ತಯಾರಿದ್ದೇನೆ. ಮತ್ತೊಂದು ಪ್ರಶ್ನೆಯನ್ನೇನು ತಾವು ಕೇಳಿದ್ದೀರಿ, ಅದಕ್ಕೆ ಸಂಬಂಧ ಪಟ್ಟಂತೆ ನಬಾರ್ಡ್‌ನವರ ಜೊತೆ ನಾವು ಚರ್ಚೆ ಮಾಡುತ್ತಿದ್ದೇವೆ. ಇಲ್ಲಿ ಎಸ್.ಆರ್. ರೇಟ್‌ಟನ್ನು ನಾವು ಪಿ.ಡಬ್ಲ್ಯೂ.ಡಿ. ಯಿಂದ ವೆರಿಫೈ ಮಾಡುವುದಿಲ್ಲ. ರೇಷ್ಮೆ ಇಲಾಖೆಯಲ್ಲಿ ಬರತಕ್ಕ ಸಂದರ್ಭದಲ್ಲಿ ನಬಾರ್ಡ್‌ನವರು ಸುಮಾರು ಆರು ತಿಂಗಳಿಗೆ ಒಂದು ಸಲ ಇದನ್ನು ರಿವೈಸ್ ಮಾಡುತ್ತಿರುತ್ತಾರೆ. ಆ ರೀತಿ ರಿವೈಸ್ ಮಾಡುವಂಥ ಸಂದರ್ಭದಲ್ಲಿ ಬೆಲೆ ಜಾಸ್ತಿಯಾದಾಗ ಆ ವ್ಯವಸ್ಥೆಯಲ್ಲಿ ಎಷ್ಟು ಬೇಕು ಎಂಬ ಬಗ್ಗೆ ನಾವು ಈಗಾಗಲೇ ನಬಾರ್ಡ್‌ನವರ ಜೊತೆ ವ್ಯವಹಾರ ಮಾಡಿದ್ದೇವೆ. ಈವತ್ತು ಏನು ಬೆಲೆ ಜಾಸ್ತಿಯಾಗಿದೆ, ಅದಕ್ಕೆ ಸರಿದೂಗಿಸುವಂಥ ವ್ಯವಸ್ಥೆಯನ್ನು ಮಾಡಿ ಆ ಹಣವನ್ನೂ ಕೂಡ ಜಾಸ್ತಿ ಮಾಡಬೇಕು ಎಂಬ ತೀರ್ಮಾನಕ್ಕೆ ಈಗಾಗಲೇ ಚರ್ಚೆಯನ್ನು ಮಾಡಿದ್ದೇವೆ. ಆದಷ್ಟು ಬೇಗ ಅದನ್ನು ಮಾಡುತ್ತೇವೆ.

ಚು.ಪ್ರ. 136(647)

(ತಡೆಹಿಡಿಯಲಾಗಿದೆ)

ಅಧ್ಯಕ್ಷರು : ಮಾನ್ಯ ಗುರುಪಾದಪ್ಪನವರೆ, ತಮ್ಮ ಪ್ರಶ್ನೆಗೆ ಉತ್ತರ... ಇದು ಆರ್ಥಿಕ ಇಲಾಖೆಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾವಣೆಯಾಗಿದೆ. ಆದ್ದರಿಂದ ಅವರು...

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಅಧ್ಯಕ್ಷರೆ, ಇದನ್ನು ಕನ್ನಡ ಸಂಸ್ಕೃತಿ ಇಲಾಖೆಗೆ ವರ್ಗಾವಣೆ ಮಾಡುವ ಅವಶ್ಯಕತೆ ಇಲ್ಲ. ಏಕೆಂದರೆ, ಇದೇನಿದೆ ಎಂದರೆ ಹಣಕಾಸು ಇಲಾಖೆಯವರೆ ದುಡ್ಡನ್ನು ಕೊಡಬೇಕಾಗಿದೆ. ಕನ್ನಡ ಸಂಸ್ಕೃತಿ ಇಲಾಖೆಯಿಂದ ಮೂರು ಸಲ ಫೈಲ್ ಹೋಗಿದೆ.

ಅಧ್ಯಕ್ಷರು : ಆರ್ಥಿಕ ಮಂತ್ರಿಗಳು ಬರುತ್ತಾರೆ. ಆದ್ದರಿಂದ ತಾವು ಇದರ ಬಗ್ಗೆ ಕೊನೆಯಲ್ಲಿ ಕೇಳುವಿರಂತೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಅವರು ಎದ್ದು ಹೋಗಿಬಿಟ್ಟರಲ್ಲಾ.

ಶ್ರೀ ಆರ್.ವಿ. ದೇಶಪಾಂಡೆ : ಸಾಹಿತ್ಯ ಮತ್ತು ಕಲೆಯ ಬಗ್ಗೆ ಇದು ಬಹಳ ಮುಖ್ಯವಾದದ್ದು. ಇಲ್ಲಿ ಚರ್ಚೆಯಾಗಿ 54 ಲಕ್ಷ ರೂಪಾಯಿ ಹಣವನ್ನು ಕೊಡಬೇಕೆಂದು ಶಿಫಾರಸ್ಸು ಮಾಡಿದ್ದಾರೆ. ಈ ಹಣವನ್ನು ಕೊಡಬೇಕು.

(ಗೊಂದಲ)

ಅಧ್ಯಕ್ಷರು : ಇದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವರ್ಗಾವಣೆಯಾಗಿದೆ.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಮಾನ್ಯ ಎಂ.ಪಿ. ಪ್ರಕಾಶ್ ರವರೂ ಬೀದರ್‌ಗೆ ಹೋಗಿಬಂದಿದ್ದಾರೆ. ಚಂದ್ರಶೇಖರ್ ಪಾಟೀಲ್ ಇದರ ಅಧ್ಯಕ್ಷರೇನಾಗಿದ್ದಾರೆ ಅವರು ಗಡಿ ಭಾಗದಲ್ಲಿ ಇಂಥ ಒಂದು ವ್ಯವಸ್ಥಿತವಾದಂಥ ಸಮ್ಮೇಳನ ಎಲ್ಲೂ ನಡೆದಿಲ್ಲವೆಂದು ಹೇಳಿದ್ದಾರೆ. ನಾನು ಮುಖ್ಯಮಂತ್ರಿಯಾದಾಗ ಇದಕ್ಕೆ ಒಂದು ಕೋಟಿ ರೂ. ಬಿಡುಗಡೆ ಮಾಡಬೇಕೆಂದು ಹೇಳಿದಾಗ ಮಾನ್ಯ ಸಿಂಧ್ಯಾರವರು ಐವತ್ತು ಲಕ್ಷ ರೂ. ಬಿಡುಗಡೆ ಮಾಡುತ್ತೇನೆಂದು ಹೇಳಿದ್ದಾರೆ. ಇದರಲ್ಲಿ ಸಾಕಷ್ಟು ರಾಜಕಾರಣ ಇದೆ. ನಾವು ಈ ಸ್ಥಳದಲ್ಲಿ ಕುಳಿತು ಅಂಥದನ್ನೆಲ್ಲಾ ಉಲ್ಲೇಖ ಮಾಡುವುದಕ್ಕಾಗುವುದಿಲ್ಲ. ತಮಗೆಲ್ಲಾ ಗೊತ್ತಿದೆ. ಕನ್ನಡ ಸಾಹಿತ್ಯ ಸಮ್ಮೇಳನ ಮಾನ್ಯ ಗುರುಪಾದಪ್ಪನವರು ಮಂತ್ರಿಗಳಾಗಿದ್ದಾಗ, ಅಲ್ಲಿಯ ಉಸ್ತುವಾರಿ ಸಚಿವರಾಗಿದ್ದಾಗ ಮಾಡಿದ್ದಾರೆ. ಆದ್ದರಿಂದ he had taken personal interest. ಆ ರೀತಿಯಾದಂಥ ವ್ಯವಸ್ಥೆ, ಊಟ, ವಸತಿ ಎಲ್ಲೂ ಆಗಿಲ್ಲ, ಬೀದರ್ ಗಡಿಭಾಗದಲ್ಲಿ ಉರ್ದು, ಮರಾಠಿ ಭಾಷೆಯ ಜನರಿರತಕ್ಕ ಭಾಗದಲ್ಲಿ ಒಂದು effective ಆಗಿ, ಪರಿಣಾಮಕಾರಿಯಾಗಿ ಕನ್ನಡ ಸಾಹಿತ್ಯ ಸಮ್ಮೇಳನ ಮಾಡಬೇಕೆಂದು ಹೇಳಿದೆವು. ಅದಾದಮೇಲೆ ಹಣವನ್ನು ಕೊಡಲೇಬೇಕಾಗುತ್ತದೆ. ಕನ್ನಡ ಸಂಸ್ಕೃತಿ ಇಲಾಖೆಯವರು ಹೇಗೆ ಹಣವನ್ನು ಕೊಡುತ್ತಾರೆ? ಮನಸ್ಸಿದ್ದರೆ ಸರ್ಕಾರ ಕೊಡಬೇಕು. ನಾನೇ ಮಾನ್ಯ ಉಪ ಮುಖ್ಯಮಂತ್ರಿಯವರಿಗೆ ಏಕೆ ಅವರಿಗೆ ಸತಾಯಿಸುತ್ತೀರಿ ಹಣವನ್ನು ಬಿಡುಗಡೆ ಮಾಡಿ ಎಂದು ಹೇಳಿದ್ದೇನೆ. ಇವರು ಹೋಗಿ ಎಷ್ಟೋ ಸಲ ಉಪ ಮುಖ್ಯಮಂತ್ರಿಯವರಿಗೆ ಹೇಳಿದ್ದಾರೆ. ಅಲ್ಲಿ ಒಂದು ಜಿಲ್ಲೆಯ ರಾಜಕಾರಣ. ಜಿಲ್ಲೆಯ ರಾಜಕಾರಣ ಇರಬಹುದು, ಬೇಕಾದ್ದು ಇರಬಹುದು. ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸರ್ಕಾರದ ನಿಮ್ಮ ಭಾವನೆ ಏನಿದೆ, ನೀವು ಹಣವನ್ನು ಕೊಡಬೇಕೆಂದು ಮಾಡಿದ್ದೀರೋ? ಇಲ್ಲವೋ? ನೀವು ಕೊಡುವುದಕ್ಕೆ ಆಗುವುದಿಲ್ಲ, ಬೇರೆಯವರು

ಬಂದು ಕೊಡಬಾರದು ಎಂದು ಹೇಳುತ್ತಾರೆ, ಇವೆಲ್ಲಾ ವಿಚಾರಗಳಿದ್ದರೆ ನಾವು ಚಂದಾ ಮಾಡುತ್ತೇವೆ. ಇವತ್ತು ಸರ್ಕಾರ ಆ ಹಣವನ್ನು ಕೊಡುವುದಿಲ್ಲ ಎನ್ನುವುದಾದರೆ ನಾವೇ contribution ಮಾಡಿ ಅದನ್ನು ಕೊಡುತ್ತೇವೆ. ಇವತ್ತು ಈ ರೀತಿಯಾದಂತಹ ತಾರತಮ್ಯವನ್ನೇನು ರಾಜ್ಯದ ಮಾನ್ಯ ಉಪ ಮುಖ್ಯಮಂತ್ರಿಗಳು ಮಾಡುತ್ತಿದ್ದಾರೋ ಇದು ಸರಿಯಲ್ಲ. ಇದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಸಹ ಬಂದಿದೆ. ತಾವು ಈ ತರಹ ಹತಮಾರಿತನ ಮಾಡುವುದು ಸರಿಯಲ್ಲ. ಮಾನ್ಯ ಪ್ರಕಾಶ್‌ರವರೆ, ತಾವೂ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಹೋಗಿ ಬಂದಿದ್ದೀರಿ. ಅಲ್ಲಿ ಒಳ್ಳೆಯ ಭಾಷಣ ಮಾಡಿದ್ದೀರಿ. ತಾವು ಒಳ್ಳೆಯ ಮಾತನಾಡುತ್ತೀರಿ ಎಂದೇ ತಮ್ಮನ್ನು ಎಲ್ಲಾ ಕಡೆಗೂ ಕರೆಯುತ್ತಾರೆ. ತಾವು ಕನ್ನಡದ ಬೆಳವಣಿಗೆ ಬಗ್ಗೆ ಹೇಳುತ್ತೀರಿ, ಕನ್ನಡ ಬೆಳೆಯಬೇಕು ಎಂದು ಹೇಳುತ್ತೀರಿ. ಈ ರೀತಿಯಾಗಿ ಹೇಳುವ ತಾವು ಇವತ್ತು ಸರ್ಕಾರದ ಪರವಾಗಿ ಉತ್ತರಿಸಬೇಕು. ನಾನು 27ಕ್ಕೇ ಅಲ್ಲಿಗೆ ಹೋಗಬೇಕಾಗಿತ್ತು. 27ರಂದೇ ನಾನು ಅಲ್ಲಿಗೆ ಹೋಗಿದ್ದೆ. ನಾನೇ ಅಧಿಕಾರದಲ್ಲಿ ಇದ್ದಿದ್ದರೆ ಇಷ್ಟರೊಳಗೆ ಹಣ ಬಿಡುಗಡೆ ಮಾಡುತ್ತಿದ್ದೆ. ಹಣ ಬಿಡುಗಡೆಗೆ ಈ ತರಹದ ತಾರತಮ್ಯ ಮಾಡಬಾರದು. ಅಂದು ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರ ನೇತೃತ್ವದಲ್ಲಿ ಒಳ್ಳೆಯ ಸಮ್ಮೇಳನ ಆಗಿದೆ ಅನ್ನತಕ್ಕಂಥ ಭಾವನೆ ಇರತಕ್ಕಂಥ ಬೇರೆ ಜನರೂ ಕೂಡ ಇದ್ದರೆ. ನನ್ನೊಬ್ಬನಿಂದಲೇ ಆ ರೀತಿ ಸಮ್ಮೇಳನ ಆಯಿತು ಎಂದು ನಾನು ಹೇಳುತ್ತಿಲ್ಲ. ರಾಜಕಾರಣದ ಒತ್ತಡದಲ್ಲಿ ಇವತ್ತು ಮಾನ್ಯ ಯಡಿಯೂರಪ್ಪನವರು ಪಕ್ಷಪಾತ ಧೋರಣೆಯನ್ನು ತೋರಿಸುತ್ತಿದ್ದಾರೆ. ಅವರ ವೈಯಕ್ತಿಕ ವಿಚಾರವಾಗಿದ್ದರೆ, ಅವರು ಪಕ್ಷಪಾತ ಮಾಡಲಿ. ಆದರೆ ಕನ್ನಡದ ಬಗ್ಗೆ ಮಾಡಬಾರದು. ಮಾನ್ಯ ಯಡಿಯೂರಪ್ಪನವರು ಈಗ ತಾನೇ ಸದನಕ್ಕೆ ಆಗಮಿಸುತ್ತಿದ್ದಾರೆ. ಎಷ್ಟೋ ಸಲ ಮಾನ್ಯ ಗುರುಪಾದಪ್ಪ ನಾಗಮಾರಪಲ್ಲಿಯವರು ಗಡಿಭಾಗದಲ್ಲಿ ನಡೆದಂತಹ ಆ ಸಾಹಿತ್ಯ ಸಮ್ಮೇಳನದ ಬಾಬ್ತು ಉಳಿದ 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿ ಎಂದು ತಮಗೆ ಮನವಿ ಮಾಡಿದ್ದಾರೆ. ಯಾವ ಒತ್ತಡಕ್ಕಾಗಿ ತಾವು ಅದನ್ನು ಕೊಡುತ್ತಿಲ್ಲವೋ ಗೊತ್ತಿಲ್ಲ. ಈಗಾಗಲೇ ಹಣವನ್ನು ಬಿಡುಗಡೆ ಮಾಡಿ ಎಂದು prssure ಹಾಕಿದ್ದಾರೆ. ನಾನೂ ಕೂಡ ಅದರ ಬಗ್ಗೆ ಹೇಳಿದ್ದೇನೆ. ಯಾವುದೇ ಒತ್ತಡಕ್ಕೆ ಮಣಿಯದೆ, ಯವುದೇ ಪಕ್ಷಪಾತದ ಧೋರಣೆ ಅನುಸರಿಸದೆ ಅದನ್ನು ತಕ್ಷಣವೇ ಬಿಡುಗಡೆ ಮಾಡುತ್ತೇನೆಂದು ಇವತ್ತು ತಾವು ಸದನದಲ್ಲಿ ಸ್ಪಷ್ಟವಾಗಿ ಹೇಳಬೇಕು. ಮಾನ್ಯ ಯಡಿಯೂರಪ್ಪನವರೆ, ತಾವು ಆ ಹಣವನ್ನು ಬಿಡುಗಡೆ ಮಾಡದಿದ್ದರೆ, ಅವರು ಅದನ್ನು ಎಲ್ಲಿಂದ ತಂದು ಕೊಡಬೇಕು?

ಶ್ರೀ ಬಿ.ಎಸ್. ಯಡಿಯೂರಪ್ಪ : ತಾವು ಅನೇಕ ಬಾರಿ ಅಲ್ಲಿ ನಡೆದಂತಹ ಕನ್ನಡ ಸಾಹಿತ್ಯ ಸಮ್ಮೇಳನದ ಬಾಬ್ತು ಹಣ ಬಿಡುಗಡೆ ಮಾಡುವ ಬಗ್ಗೆ ಹೇಳಿದ್ದೀರಿ. ಈಗಾಗಲೇ ನಾವು 50 ಲಕ್ಷ ರೂಪಾಯಿಗಳನ್ನು ಅದಕ್ಕಾಗಿ ಬಿಡುಗಡೆ ಮಾಡಿದ್ದೇವೆ. ಇನ್ನೂ 50 ಲಕ್ಷ ರೂಪಾಯಿಗಳು ಬಿಡುಗಡೆಯಾಗಬೇಕಾಗಿದೆ. 1 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುತ್ತೇವೆ ಎಂದು ಸರ್ಕಾರ ಪ್ರಾಮೀಸ್ ಮಾಡಿತ್ತು ಎಂದು ನೀವು ನನ್ನ ಹತ್ತಿರ ಹೇಳಿದ್ದೀರಿ. ಸಮ್ಮೇಳನದ ಖರ್ಚು ವೆಚ್ಚಗಳ

ವಿವರಗಳನ್ನು ನಮಗೆ ಕಳುಹಿಸಿಕೊಟ್ಟರೆ, ಅದರ ಅಗತ್ಯ ಇದೆಯೋ ಇಲ್ಲವೋ ಎಂದು ನೋಡಿಕೊಂಡು ಹಣ ಬಿಡುಗಡೆ ಮಾಡಲು ಅನುಕೂಲವಾಗುತ್ತದೆ. ನೀವು ಮುಖ್ಯಮಂತ್ರಿಯಾಗಿದ್ದಾಗ ಕೊಟ್ಟಿದಂತಹ ಭರವಸೆ ಈಡೇರಿಕೆಯಲ್ಲಿ ಏನೂ ವ್ಯತ್ಯಾಸ ಮಾಡುವುದಿಲ್ಲ. ಇದರಲ್ಲಿ ರಾಜಕಾರಣದ ಪ್ರಶ್ನೆ ಇಲ್ಲ. ಅಲ್ಲಿ ಅಷ್ಟೊಂದು ಒಳ್ಳೆಯ ಕಾರ್ಯಕ್ರಮವಾಗಿದೆ. ಆ ಖರ್ಚು ವೆಚ್ಚದ ವಿವರಗಳನ್ನು ನೀವು ಕಳುಹಿಸಿದರೆ, ಅದು ಅಗತ್ಯ ಇದ್ದರೆ, ಆ ಹಣವನ್ನು ಬಿಡುಗಡೆ ಮಾಡುವುದಕ್ಕೆ ನಾವು ಒಂದು ಕ್ಷಣ ಕೂಡ ತಡ ಮಾಡುವುದಿಲ್ಲ. ನಾವು ನಿಮ್ಮ ಜೊತೆಗೆ ಇದ್ದೇವೆ, ಆ ಹಣವನ್ನು ಬಿಡುಗಡೆ ಮಾಡುತ್ತೇವೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸಮ್ಮೇಳನದ ಖರ್ಚು ವೆಚ್ಚಗಳನ್ನು ನೋಡಿಕೊಳ್ಳಲು ನಾವು Deputy Commissione ಅವರನ್ನೇ treasurer ಎಂದು ಮಾಡಿದ್ದೆವು. ಅವರೇ ಎಲ್ಲಾ ಖರ್ಚು ವೆಚ್ಚದ ವಿವರಗಳನ್ನು ಕಳುಹಿಸುತ್ತಿದ್ದಾರೆ. ಯಾರೂ ಕೈಯ್ಯಿಂದಲೂ ಅದನ್ನು ತೆಗೆದುಕೊಂಡಿಲ್ಲ. Deputy Commissioner ಅವರೇ ಅದರ treasurer ಆಗಿದ್ದರು. ಇಲ್ಲಿ ಯಾವ ಅವ್ಯವಹಾರ ಆಗುವ ಪ್ರಶ್ನೆ ಬರುವುದಿಲ್ಲ. Deputy Cpmmissioner ಅವರೇ treasurer ಆಗಿದ್ದರಿಂದ ಅಲ್ಲಿ ಅವ್ಯವಹಾರ ಆಗುವುದೇ ಇಲ್ಲ. ತಾವು Deputy Commissioner ಅವರನ್ನು ಕೇಳಿ, ಹಣ ಬಿಡುಗಡೆ ಮಾಡುತ್ತೇವೆ ಎಂದು ಹೇಳಿದರೆ ಮುಗಿದು ಹೋಯಿತು.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ನಿಮ್ಮನ್ನೂ ಕರೆಸುತ್ತೇನೆ, ಮಾನ್ಯ ವಿರೋಧ ಪಕ್ಷದ ನಾಯಕರನ್ನೂ ಕರೆಸುತ್ತೇನೆ. ಎಲ್ಲರೂ ಖರ್ಚು ವೆಚ್ಚದ ವಿವರಗಳನ್ನು ನೋಡೋಣ. ಈಗಾಗಲೇ ಅಗತ್ಯ ಇರುವಂತಹ 50 ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ಎಷ್ಟು ಖರ್ಚಾಗಿದೆ ಎಂಬುದನ್ನು ನೋಡಿಕೊಂಡು ಉಳಿದಂತಹ ಹಣವನ್ನು ಬಿಡುಗಡೆ ಮಾಡಲಿಕ್ಕೆ ನಾನು ಬದ್ಧನಾಗಿದ್ದೇನೆ. ನಾನು ಮಾನ್ಯ ವಿರೋಧ ಪಕ್ಷದ ನಾಯಕರನ್ನು, ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಮಾತನಾಡುತ್ತೇನೆ. ಆ ಮಾತುಕತೆ ಮಾಡುವಾಗ ತಮ್ಮನ್ನೂ ಸಹ ಕರೆಸುತ್ತೇನೆ. ಅಲ್ಲೇ, ಸ್ಥಳದಲ್ಲೇ ಉಳಿದಂತಹ ಹಣವನ್ನು ನಾವು ಕೊಡುತ್ತೇವೆ.

ಪ್ರಶ್ನೆ ಸಂಖ್ಯೆ : 127(654)

ಅಧ್ಯಕ್ಷರು : ಮಾನ್ಯ ಖೂಬಾರವರೆ, ನಿಮ್ಮ ಪ್ರಶ್ನೆಗೆ ಉತ್ತರಿಸಲು 15 ದಿವಸಗಳ ಕಾಲ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ : ಮಾನ್ಯ ಅಧ್ಯಕ್ಷರೆ, ಈ ರೀತಿಯಾಗಿ 15 ದಿವಸಗಳ ಕಾಲ ಮಾನ್ಯ ಸದಸ್ಯರಿಗೆ ತಮ್ಮ ಪ್ರಶ್ನೆಗೆ ಉತ್ತರ ಸಿಗುವುದಿಲ್ಲ ಎಂದರೆ ಹೇಗೆ?

ಅಧ್ಯಕ್ಷರು : ಕಾಲಾವಕಾಶ ಕೇಳಿದ್ದಾರೆ. ಮುಂದೆ ಅದಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ : ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಉತ್ತರಿಸಲೂ ಸಹ ಹದಿನೈದು ದಿವಸಗಳ ಕಾಲ ಕಾಲಾವಕಾಶ ಪಡೆದುಕೊಂಡರೆ ಹೇಗೆ?